

ಡಾ.ವಿನೋದ ಛೆಬ್ಬಿ

**ಕಡಿಮೆ ಕಾಮಾಸಕ್ತರು ಕೂಟ ಬೇಡವೆನ್ನುವಾಗ ಹೆಚ್ಚು ಕಾಮಾಸಕ್ತರ ಸ್ವಂತಿಕೆಯ ಮಟ್ಟ ಕೆಳಗಿಳಿಯುತ್ತದೆ!**

# 305: ಹೊಸ ದಾರಿ - 45

ಪ್ರತಿಫಲಿತ ಸ್ವಂತಿಕೆ ಹಾಗೂ ನಿಜ ಸ್ವಂತಿಕೆಗಳು ಕಾಮಾಪೇಕ್ಷೆಯ ಮೇಲೆ ಹೇಗೆ ಪ್ರಭಾವ ಬೀರುತ್ತವೆ ಎಂಬುದರ ಬಗೆಗೆ ಚರ್ಚಿಸುತ್ತಿದ್ದೇವೆ. ಯಾವುದೇ ಸ್ಥಿರ ಸಂಬಂಧದಲ್ಲಿ ಸಂಗಾತಿಗಳ ಕಾಮಾಪೇಕ್ಷೆಯು ಒಂದೇ ಸಮನೆ ಇರದೆ ಏರುಪೇರಾಗುತ್ತದೆ ಎಂದು ಕಂಡುಕೊಂಡೆವು. ಆಗ ಇಬ್ಬರ ನಡುವೆ ಏನೇನು ಪ್ರಕ್ರಿಯೆಗಳು ನಡೆಯಬಹುದು? ದೃಷ್ಟಾಂತಕ್ಕಾಗಿ ಶಶಿ–ಭೂಷಣರ ಲೈಂಗಿಕ ಸಂಬಂಧವನ್ನು ತೆಗೆದುಕೊಳ್ಳೋಣ.

ಪ್ರಕ್ರಿಯೆ 1: ಮದುವೆಯ ಮುಂಚೆ ಶಶಿಗೆ ಲೈಂಗಿಕ ಸಂಬಂಧವೇನೆಂಬುದು ಗೊತ್ತಿರಲಿಲ್ಲ. ಗೊತ್ತೇ ಇಲ್ಲದವಳಿಗೆ 'ತೊಂದರೆಯಾಗಬಹುದು' ಎಂದು ಹೇಗೆ ಕಲ್ಪಿಸಿಕೊಳ್ಳಬಲ್ಲಳು? ಹಾಗಾಗಿ ಮದುವೆ ಎಂತಾದಮೇಲೆ ಲೈಂಗಿಕ ಸಂಬಂಧವು ಸಹಜವಾಗಿ ಆಗುತ್ತದೆ ಎಂದು ಅಂದುಕೊಂಡಿದ್ದಳು – ಅವರಮ್ಮ, ಅಜ್ಜಿ ಹಾಗೂ ನಾವೆಲ್ಲ ಅಂದುಕೊಂಡಂತೆ. ಇತ್ತ ಭೂಷಣನ ನಂಬಿಕೆಯೇನೂ ಭಿನ್ನವಾಗಿರಲಿಲ್ಲ. ಇವರ ಲೈಂಗಿಕ ಸಂಬಂಧ ಶುರುವಾದಾಗ ಭೂಷಣ ಮೊದಲ ಹೆಜ್ಜೆ ಇಟ್ಟಿದ್ದರಿಂದ, ಹಾಗೂ ನಮ್ಮಲ್ಲಿ ಗಂಡಸೇ ಮೊದಲು ಹೆಜ್ಜೆಯಿಡುವ, ಹೆಣ್ಣು ಅವನನ್ನು ಅನುಸರಿಸುವ ವಾಡಿಕೆ ಇರುವುದರಿಂದ (ಸಪ್ತಪದಿ ಗೊತ್ತಲ್ಲ?) ಭೂಷಣನ ಕಾಮಾಸಕ್ತಿಯೇ ಅವರಿಬ್ಬರ ಕಾಮಾಪೇಕ್ಷೆಗಳನ್ನು ಅಳೆಯುವ ಸಾಧನವಾಯಿತು. ಅದರಿಂದ ಅಳೆದುಕೊಂಡು ಶಶಿಯು ತನ್ನ ಕಾಮಾಪೇಕ್ಷೆಯು ಅವನದಕ್ಕಿಂತ ಕಡಿಮೆಯಿದೆ ಎಂದು ಭಾವಿಸಿದಳು. ಅವನು ಕೇಳಿದಾಗ ಒಪ್ಪಿಸಿಕೊಳ್ಳುವ ತನ್ನ ಸ್ಥಾನವು ಎರಡನೆಯದು ಎಂದುಕೊಂಡಳು– ಕಾಮಾಸಕ್ತಿಯು ಮೊಟಕಾಗುವುದು ಇಲ್ಲಿಂದಲೇ.

ಪ್ರಕ್ರಿಯೆ 2: ಭೂಷಣ ಕೂಟಕ್ಕೆ ತಯಾರಾದಾಗ ಶಶಿ ಆಗದಿದ್ದರೆ ಅವಳನ್ನು ಭಾವನಾತ್ಮಕವಾಗಿ ಬಗ್ಗುಬಡಿಯುತ್ತಿದ್ದ. ನಿನಗೆ ಲೈಂಗಿಕ ಸಮಸ್ಯೆ ಇದೆ (You're frigid) ಎಂದು ಹೆಸರಿಡುತ್ತಿದ್ದ. ಹೀಗೇಕೆ? ಸ್ವಂತಿಕೆಯ ಭಾಷೆಯಲ್ಲಿ ಹೇಳಬೇಕೆಂದರೆ, ಕೂಟದ ಮೂಲಕ ಆತ್ಮಪ್ರತಿಷ್ಠೆಯನ್ನು ಮೆರೆಯಲು ಶಶಿ ಅವಕಾಶ ಕೊಡದಿದ್ದರಿಂದ ಅವನ ಪ್ರತಿಫಲಿತ ಸ್ವಂತಿಕೆ ಮೊಟಕಾಯಿತು. ಇದನ್ನು ಅರ್ಥಮಾಡಿಕೊಳ್ಳಲು ಅವರ ಸಂಭಾಷಣೆಯನ್ನು ಗಮನಿಸಿ:

ಭೂಷಣ: ನನಗೆ ತಡಕೊಳ್ಳಲಾರದಷ್ಟು ಉದ್ರೇಕವಾಗಿದೆ. ಬೇಡವೆನ್ನಬೇಡ.

ಶಶಿ: ನನಗೆ ಮನಸ್ಸಿಲ್ಲ. ನಿಮ್ಮಷ್ಟಕ್ಕೆ ನೀವೇ ಮಾಡಿಕೊಳ್ಳಿ.

ಭೂಷಣ: ಹಾಗಾದರೆ ಮದುವೆ ಯಾಕಾಗಿರೋದು?

ಶಶಿ: ಕೇಳಿದಾಗ ಕೊಡಲು ನಾನೇನು ಸೂ*ಯಲ್ಲ.

ಭೂಷಣ: ನೀನು ಹೆಣ್ಣಲ್ಲ, *#%@*+~!

ತಮ್ಮ ಪ್ರತಿಫಲಿತ ಸ್ವಂತಿಕೆಗೆ ಬೆಲೆ ಸಿಗದಿರುವಾಗ ಹೆಚ್ಚು ಕಾಮಾಸಕ್ತರು ಸಾಮಾನ್ಯವಾಗಿ ಸಂಗಾತಿಯನ್ನು ಹೀನೈಸುತ್ತಾರೆ.

ಪ್ರಕ್ರಿಯೆ 3: ಹೆಚ್ಚು ಕಾಮಾಸಕ್ತರು ಸಂಗಾತಿಗೆ ಹಪಹಪಿಸಿದಷ್ಟೂ ತಿರಸ್ಕೃತರಾಗುತ್ತಾರೆ; ತಿರಸ್ಕೃತರಾದಷ್ಟೂ ತನ್ನಲ್ಲೇನೋ ದೋಷವಿದೆ, ಹಾಗಾಗಿ ತಾನು ಪರಿಪೂರ್ಣನ/ಳಲ್ಲ ಎನ್ನುವ ಭಾವ ಹೆಚ್ಚು ಕಾಡುತ್ತದೆ. ನಿರಾಕರಣೆ ಹೆಚ್ಚಾದಷ್ಟೂ ದೋಷದ ಅನಿಸಿಕೆ ಹೆಚ್ಚಾಗುತ್ತ, ಕೊನೆಗೆ ನಾನು ಲೈಂಗಿಕ ವ್ಯಕ್ತಿಯೇ ಅಲ್ಲ ಎನ್ನುವ ಮಟ್ಟಿಗೆ ಹೋಗುತ್ತಾರೆ. ಪ್ರತಿಫಲಿತ ಸ್ವಂತಿಕೆಯನ್ನು ಅವಲಂಬಿಸಿದವರು ಕೀಳರಿಮೆಯಿಂದ ರಕ್ಷಿಸಿಕೊಳ್ಳಲು ಸಂಗಾತಿಯನ್ನು ಬಯ್ದುಕೊಳ್ಳುತ್ತಾರೆ – ನರಿಯು ದ್ರಾಕ್ಷಿ ಹುಳಿ ಎಂದುಕೊಂಡಂತೆ. ಕೊರತೆ ನಮ್ಮಲ್ಲಿರುವಾಗ ಇತರರ ಕೊರತೆ ಬಗ್ಗೆ ಬಯ್ದುಕೊಳ್ಳುವುದು ಹೆಚ್ಚು ಸುರಕ್ಷಿತ! ಹಾಗಾಗಿ ಕಡಿಮೆ ಕಾಮಾಸಕ್ತರನ್ನು ಕೀಳಾಗಿ ಕಾಣುವುದು ಸಾರ್ವತ್ರಿಕವಾಗಿದೆ. ಇವನು ಗಂಡಸಲ್ಲ, ಇವಳು ಹೆಂಗಸಲ್ಲ ಎನ್ನುವ ಆರೋಪಗಳು ಇಲ್ಲಿಂದಲೇ ಹುಟ್ಟುತ್ತವೆ.

ಪ್ರಕ್ರಿಯೆ 4: ಭೂಷಣ ಹೆಸರಿಡುವಾಗ ಶಶಿ ಪ್ರತಿಭಟಿಸಿದ್ದು ಕಾಣುತ್ತಿದೆ. ಅವಳೇನು ಅಂದುಕೊಳ್ಳುತ್ತಿದ್ದಾಳೆ? 'ನೀನು ಹೀಗಾಡಿದರೆ ನನಗೆ ತುಂಬಾ ಬೇಜಾರಾಗುತ್ತದೆ. ದಿನವೆಲ್ಲ ಡಿಪ್ರೆಶನ್‌ನಲ್ಲಿ ಇರುತ್ತೇನೆ. ತಲೆಯಲ್ಲಿ ಸದಾ ನಮ್ಮ ವಾಗ್ವಾದವೇ ಗುಯ್ಗುಡುತ್ತದೆ. ನಿನ್ನನ್ನು ನಿರಾಸೆಗೊಳಿಸಲು ನನ್ನ ಮನಸ್ಸಿಗೆ ನೋವಾಗುತ್ತದೆ.' ಇಂಥ ವಿಚಾರಧಾರೆ ಅವಳ ಕಾಮಾಸಕ್ತಿಯನ್ನು ಇನ್ನೂ ಕುಗ್ಗಿಸುತ್ತದೆ.

ಪ್ರಕ್ರಿಯೆ 5: ಭೂಷಣನಿಂದ ಶಶಿಗೆ ಎರಡು ಸಂದೇಶಗಳು ಬರುತ್ತಿವೆ. ಒಂದು: ನೀನು ದೋಷಪೂರಿತಳು, ಅಸಮರ್ಥಳು. ನಿನಗೆ ಸಹಜವಾಗಿ ಇರಬೇಕಾದುದೇ ಇಲ್ಲ. ಇನ್ನೊಂದು: ನನಗೆ ಬೇಕಾದುದು ನಿನ್ನಲ್ಲಿದೆ. ಅದು ನನಗೆ ಬೇಕೇಬೇಕು. ಹಾಗಾಗಿ ಅದನ್ನು ಕೊಡದಿರಲು ನಿನಗೆ ಹಕ್ಕಿಲ್ಲ. ಇಲ್ಲೇನು ಕಾಣುತ್ತದೆ? ಒಂದು ಕಡೆ ದೋಷಪೂರಿತಳು, ಇನ್ನೊಂದುಕಡೆ ಸಮರ್ಥಳು – ಇವೆರಡರಲ್ಲಿ ತಾನು ಯಾರೆಂದು ಅರ್ಥವಾಗದೆ ಕಡಿಮೆ ಕಾಮಾಸಕ್ತರಿಗೆ ಗೊಂದಲವಾಗುತ್ತದೆ.

ಇಲ್ಲೊಂದು ಸಂದೇಹ: ಕಡಿಮೆ ಕಾಮಾಸಕ್ತರು ಕಾಮಕೂಟಕ್ಕೆ ಯಾಕೆ ಪೀಠಿಕೆ ಹಾಕುವುದಿಲ್ಲ? ಕಾರಣ ಕುತೂಹಲಕರ. ಹೆಚ್ಚು ಕಾಮಾಸಕ್ತರು ಕಡಿಮೆ ಕಾಮಾಸಕ್ತರನ್ನು ಪ್ರಚೋದಿಸುತ್ತ ಇರುತ್ತಾರಲ್ಲವೆ? ಎಲ್ಲ ಕಡಿಮೆ ಕಾಮಾಸಕ್ತರಂತೆ ಶಶಿ ಗಂಡನಿಂದ ಪ್ರೀತಿಯನ್ನೂ ಮೆಚ್ಚುಗೆಯನ್ನೂ ಬಯಸುತ್ತಿದ್ದಾಳೆ. ತನ್ಮೂಲಕ ಆಕೆಗೆ ಪ್ರೇಮಿಯ ಬೆಲೆ ಬರುತ್ತದೆ. ಆದರೆ ಇಲ್ಲಿ ಬೆಲೆ ಬರುವುದು ತಾನು ಹೆಚ್ಚು ಕಾಮಾಸಕ್ತಳು ಎನಿಸಿಕೊಂಡರೆ ಮಾತ್ರ. ಹಾಗೆಂದು ಭೂಷಣ ಅವಳಿಗೆ ಬೆಲೆಕೊಡಲು ಹೊರಟರೆ, (ನೀನು ಚೆನ್ನಾಗಿದ್ದೀಯಾ, ಆಕರ್ಷಕವಾಗಿದ್ದೀಯಾ) ಕಾಮಾಸಕ್ತಿ ಹೆಚ್ಚಿಸಿಕೊಳ್ಳಲು ಅವಳ ಮೇಲೆ ಒತ್ತಡ ತಂದಂತೆ ಆಗುತ್ತದೆ. ತಾನು ಬೇಡವೆಂದಾಗ ಭೂಷಣ ತಿರಸ್ಕೃತಗೊಂಡಂತೆ ವರ್ತಿಸುವುದನ್ನು ಕಂಡಿದ್ದಾಳೆ. ಹಾಗಾಗಿ ಅವನೊಡನೆ ಲೈಂಗಿಕವೆನಿಸುವ ಯಾವುದೇ ಕ್ರಿಯೆಯಲ್ಲಿ ಭಾಗವಹಿಸಲು ಹಿಂಜರಿಯುತ್ತಾಳೆ. ಇದರರ್ಥವೇನು? ಕಡಿಮೆ ಕಾಮಾಸಕ್ತರ ಕಾಮಾಸಕ್ತಿಯು ಕಡಿಮೆಯಾದುದನ್ನು ಕಂಡಾಗ ಹೆಚ್ಚು ಕಾಮಾಸಕ್ತರ ಸ್ವಂತಿಕೆಯು ಕಡಿಮೆಯಾಗುತ್ತದೆ! ಪರಿಣಾಮವಾಗಿ ಹೆಚ್ಚು ಕಾಮಾಸಕ್ತರು ಅನಾಕರ್ಷಕರಾಗಿ ಪ್ರಣಯಕ್ಕೆ ಅನರ್ಹರೆಂದು ಭಾವಿಸುತ್ತಾರೆ.

ಪ್ರಕ್ರಿಯೆ 6: ಒಟ್ಟಿನಲ್ಲಿ ಹೆಚ್ಚು ಕಾಮಾಸಕ್ತರು ಕಡಿಮೆ ಕಾಮಾಸಕ್ತರನ್ನು ಓಲೈಸುವಾಗ ತಮ್ಮ ಕುಂದುತ್ತಿರುವ ಸ್ವಂತಿಕೆಯನ್ನು ಸಬಲೀಕರಿಸುವ ಹವಣಿಕೆಯಲ್ಲಿ ಇರುತ್ತಾರೆ. ಅವರ ಈ ಅಸುರಕ್ಷಿತ ಭಾವವನ್ನು ಗಮನಿಸಿ ಕಡಿಮೆ ಕಾಮಾಸಕ್ತರು ಇನ್ನಷ್ಟು ಹಿಂಜರಿಯುತ್ತಾರೆ. ವರ್ತುಲ ವಿಷವರ್ತುಲ ಆಗುತ್ತದೆ.

ಪ್ರಕ್ರಿಯೆ 7: ಈ ಸಂದರ್ಭದಲ್ಲಿ ಹೆಚ್ಚು ಕಾಮಾಸಕ್ತರು ಇನ್ನೊಂದು ವಿಧದ ಪ್ರಬುದ್ಧ ಭಾವವನ್ನು ಮೆರೆಯುತ್ತಾರೆ. ಕಡಿಮೆ ಕಾಮಾಸಕ್ತರ 'ಸಮಸ್ಯೆ'ಯನ್ನು ಪರಿಹರಿಸಲು ಸಹಾಯ ಹುಡುಕುತ್ತಾರೆ. ಅವರ ಚಿಕಿತ್ಸೆಗೆ 'ಸಹಕರಿಸಲು' ತಯಾರಾಗುತ್ತಾರೆ. ಅವರ ಸರ್ವಜ್ಞ ಧೋರಣೆಯನ್ನು ನೋಡಿ ಕಡಿಮೆ ಕಾಮಾಸಕ್ತರ ಮೈಮೇಲೆ ಮುಳ್ಳುಗಳು ಬರುತ್ತವೆ. ಹಾಗಾಗಿ ಸಮಸ್ಯೆ ಇನ್ನಷ್ಟು ಬಿಗಡಾಯಿಸುತ್ತದೆ. ಕಡಿಮೆ ಕಾಮಾಸಕ್ತರು ಒಂದುವೇಳೆ ಚಿಕಿತ್ಸೆಗೆ ಬಂದರೆ ಸಂಗಾತಿಗೋಸ್ಕರವೇ ವಿನಾ ತಮಗೋಸ್ಕರ ಅಲ್ಲ.

ಪ್ರಕ್ರಿಯೆ 8: ಬರಬರುತ್ತ ಕಡಿಮೆ ಕಾಮಾಸಕ್ತರು ನಿರಾಕರಣೆಯ ಪಲಾಯನವಾದವನ್ನು ನಿಲ್ಲಿಸುತ್ತಾರೆ. ಹೆಚ್ಚು ಕಾಮಾಸಕ್ತರನ್ನು ಎದುರು ಹಾಕಿಕೊಳ್ಳುತ್ತ ತಮ್ಮ ಸಮಸ್ಯೆಯನ್ನು ಸಮರ್ಥನೆಯನ್ನು ಹುಡುಕಿಕೊಳ್ಳುವುದು, ಸಂಗಾತಿಯನ್ನು ಅಸಹ್ಯಪಡುವುದು, ಅನಾಸಕ್ತಿಯಿಂದ ನಿಷ್ಕ್ರಿಯವಾಗಿ ಒಪ್ಪಿಸಿಕೊಳ್ಳುವುದು ಮುಂತಾದ ವರ್ತನೆಗಳನ್ನು ಮುಂದುಮಾಡುತ್ತಾರೆ. ಹೆಚ್ಚು ಕಾಮಾಸಕ್ತರು ಇದನ್ನು ವೈಯಕ್ತಿಕವಾಗಿ ತೆಗೆದುಕೊಳ್ಳುತ್ತಾರೆ. ಹಾಗಾಗಿ ಪರಿಸ್ಥಿತಿ ಇನ್ನಷ್ಟು ವಿಷಮಿಸುತ್ತದೆ.

ಪ್ರಯೋಗ 40: ಸಂಗಾತಿಯೊಡನೆ ಕುಳಿತುಕೊಂಡು ನಿಮ್ಮಿಬ್ಬರ ಕಾಮಾಸಕ್ತಿಗಳನ್ನು ಒಂದಕ್ಕೊಂದು ಜೋಡಿಸುತ್ತ ಮೇಲೆ ತಿಳಿಸಿದ ಪ್ರಕ್ರಿಯೆಗಳಿಗೆ ತಳಕುಹಾಕಲು ಆಗುತ್ತದೆಯೇ ಎಂದು ನೋಡಿ.

ವಾರದ ಪ್ರಶ್ನೆಗಳು: ಕಾಮಾಸಕ್ತಿಯ ಕುರಿತು ಯೋಚಿಸುವಾಗ ಈಮೇಲಿನ ಪ್ರಕ್ರಿಯೆಗಳ ಬದಲು ನಿಮ್ಮೊಳಗೆ ಮತ್ತೇನಾದರೂ ಸ್ಫುರಿಸುತ್ತದೆಯೆ? ಅದರರ್ಥವೇನು? ಅದರ ಹಿನ್ನೆಲೆಯಲ್ಲಿ ನೀವು ಯಾರು? ಇದರ ಬಗೆಗೆ ಜಿಜ್ಞಾಸೆ ನಡೆಸಲು ಇಚ್ಛಿಸಿದರೆ ನನ್ನನ್ನು ಸಂಪರ್ಕಿಸಿ.

ಸಂಪರ್ಕಕ್ಕೆ: 8494933888; Email: vinod.chebbi@gmail.com